# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | 988 |
| ಸದಸ್ಯರ ಹೆಸರು | ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು |
| ಉತ್ತರಿಸುವ ಸಚಿವರು | ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |
| ಉತ್ತರಿಸುವ ದಿನಾಂಕ | 24.02.2023 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಯಲಹಂಕ ಬಳಿಯಲ್ಲಿ ಜಾರಕಬಂಡೆ ಕಾವಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಉದ್ಯಾನ ನಿರ್ಮಿಸಲು ಯೋಜನೆ ರೂಪಿಸಲಾಗಿದೆಯೇ; (ಹಾಗಿದ್ದಲ್ಲಿ, ಯೋಜನೆಯ ವಿವರ ನೀಡುವುದು) | ಹೌದು, ಬೆಂಗಳೂರಿನ ಯಲಹಂಕ ಬಳಿಯಲ್ಲಿ ಜಾರಕಬಂಡೆ ಕಾವಲಿನಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯಿಂದ ನಗರವನವನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿರುತ್ತದೆ.<br>**ಜಾರಕಬಂಡೆ ಕಾವಲ್ ನಗರವನದ ಯೋಜನೆಯ ವಿವರಗಳು ಕೆಳಕಂಡಂತಿವೆ.**<br>1. ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳು ಜಂಟಿಯಾಗಿ ನಗರವನವನ್ನು ಅಭಿವೃದ್ಧಿ ಪಡಿಸಲು ತೀರ್ಮಾನಿಸಲಾಗಿದೆ.<br>2. ಅರಣ್ಯ ಇಲಾಖೆಯ ಒಡೆತನದಲ್ಲಿರುವ ಜಾರಕಬಂಡೆ ಕಾವಲ್ ನ ರಿಸರ್ವ್ ಫಾರೆಸ್ಟ್ ಗೆ ಒಳಪಡುವ 178.34 ಎಕರೆಗಳು, ಕಂದಾಯ ಇಲಾಖೆಯಿಂದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ಯಲಹಂಕ, ತೋಟಗಾರಿಕೆ ಇಲಾಖೆರವರಿಗೆ ಹಸ್ತಾಂತರಿಸಿರುವ 9.38 ಎಕರೆ ಹಾಗೂ ಕಂದಾಯ ಇಲಾಖೆಯಿಂದ ತೋಟಗಾರಿಕೆ ಇಲಾಖೆಗೆ ಹಸ್ತಾಂತರವಾಗಬೇಕಿರುವ 5.0 ಎಕರೆ ಸೇರಿ ಒಟ್ಟಾರೆ 193.34 ಎಕರೆ ಪ್ರದೇಶದಲ್ಲಿ ನಗರವನವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ.<br>3. ಅರಣ್ಯ ಇಲಾಖೆಯ ಆದೇಶ ಸಂಖ್ಯೆ:ಅಪಜೀ 57 ಎಫ್ ಎ ಪಿ 2020 ರಲ್ಲಿ ಹೊರಡಿಸಿರುವ ನಗರವನದ ಹೊಸ ಮಾರ್ಗಸೂಚಿಗಳನ್ವಯ ನಗರ ವನವನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಬ್ಯಾಂಬೋ ಗ್ರೊ, ಕ್ಯಾಕ್ಟೈ ಗಾರ್ಡನ್, ಫ್ಲಾಂಟ್ ಗ್ರೊ, ಔಷಧಿ ಸಸ್ಯಗಳ ವನ, ಅವಿನಾಶದ ಅಂಚಿನಲ್ಲಿರುವ ಸಸ್ಯ ಪ್ರಭೇದಗಳ ತಾಕು, ಬರ್ಡ್ ಟ್ರಯಲ್, ನ್ಯಾಚುರಲ್ ಟ್ರಯಲ್, ಬಟರ್ ಪ್ಲೈ ಗಾರ್ಡನ್, ನಕ್ಷತ್ರ ವನ, ದೇವಿ ವನ , ಆರ್ಕಿಡೇರಿಯಂ, ಫಾರಸ್ಟ್ ನರ್ಸರಿ, ಫಾರಸ್ಟ್ ವಸ್ತು ಸಂಗ್ರಹಾಲಯ, ಇನ್ ಸೆಕ್ಸ್ ಹೋಟೆಲ್, ಮಿಯಾವಾಕಿ ಫಾರಸ್ಟ್, ವ್ಯೂ ಪಾಯಿಂಟ್, ನಾಲಾ, ಕೆರೆಗಳ ಅಭಿವೃದ್ಧಿ, ಹೀಗೆ ಪರಿಸರ ಪೂರಕವಾದ ಆಯ್ದ ಕಾರ್ಯಗಳನ್ನು ಅಳವಡಿಸಲಾಗಿದೆ.<br>4. ಅನುದಾನ ಲಭ್ಯತೆಗೆ ಅನುಗುಣವಾಗಿ ಹಂತ-ಹಂತವಾಗಿ ನಗರ ವನವನ್ನು ಅಭಿವೃದ್ಧಿ ಪಡಿಸಲಾಗುವುದು. |
| ಆ) | ಸದರಿ ಯೋಜನೆಗೆ ಎಷ್ಟು ಎಕರೆ ಭೂಮಿಯನ್ನು ವಶಪಡಿಸಿ ಕೊಳ್ಳಲಾಗಿದೆ; ಸದರಿ ಯೋಜನೆ ಅಂದಾಜು ವೆಚ್ಚವೆಷ್ಟು; ಯಾವ ಕಾಲಮಿತಿಯಲ್ಲಿ ಸದರಿ ಯೋಜನೆಯನ್ನು | ➢ ಸದರಿ ಯೋಜನೆಗೆ ಕಂದಾಯ ಇಲಾಖೆಯಿಂದ ಅವಲಹಳ್ಳಿ ಗ್ರಾಮದ ಸರ್ವೆ ನಂ. 79 ರಲ್ಲಿನ 9.38 ಎಕರೆ ಪ್ರದೇಶವನ್ನು ತಹಶೀಲ್ದಾರ್, ಯಲಹಂಕ ರವರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ಯಲಹಂಕ, ತೋಟಗಾರಿಕೆ ಇಲಾಖೆರವರಿಗೆ ಹಸ್ತಾಂತರಿಸಿರುತ್ತಾರೆ ಹಾಗೂ ಇದೇ |

| | | |
|---|---|---|
| | ಪೂರ್ಣಗೊಳಿಸಲಾಗುವುದು; | ಸರ್ವೆ ನಂ. ನಲ್ಲಿ 5.00 ಎಕರೆ ಪ್ರದೇಶವನ್ನು ಸಹಾ ತೋಟಗಾರಿಕೆ ಇಲಾಖೆಗೆ ಒದಗಿಸುವ ಪ್ರಸ್ತಾವನೆಯು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ.<br>➢ ಅರಣ್ಯ ಇಲಾಖೆಗೆ ಸೇರಿದ ಸರ್ವೇ ನಂ.59- ರಿಸರ್ವ್ ಫಾರೆಸ್ಟ್ ಪ್ರದೇಶ (123 ಎಕರೆ), ಸರ್ವೇ ನಂ.23- ಕೃಷ್ಣರಾಜಪುರ (25.96 ಎಕರೆ), ಸರ್ವೇ ನಂ. 22- ಮೈಲಪ್ಪನ ಹಳ್ಳಿ (25.96 ಎಕರೆ), ಸರ್ವೇ ನಂ.79- ಅವಲಹಳ್ಳಿ, (3.42 ಎಕರೆ) ರಲ್ಲಿ ಒಟ್ಟು 178.34 ಎಕರೆ ಪ್ರದೇಶವನ್ನು ಗುರುತಿಸಲಾಗಿದೆ.<br>➢ ಸದರಿ ಯೋಜನೆಯ ಅಂದಾಜು ವೆಚ್ಚವನ್ನು ಸಿದ್ಧಪಡಿಸಲಾಗುತ್ತಿದೆ.<br>➢ ಅನುದಾನದ ಲಭ್ಯತೆ ಮೇರೆಗೆ ಹಂತ-ಹಂತವಾಗಿ ನಗರವನದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು. |
| ಇ) | ಸದರಿ ಅರಣ್ಯ ಪ್ರದೇಶದಲ್ಲಿನ ಜೀವ ವೈವಿದ್ಯತೆಗೆ ಧಕ್ಕೆಯಾಗದಂತೆ ಉದ್ಯಾನ ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ➢ ಸದರಿ ಅರಣ್ಯ ಪ್ರದೇಶದಲ್ಲಿನ ಜೀವ ವೈವಿದ್ಯತೆಗೆ ಧಕ್ಕೆಯಾಗದಂತ ನಗರವನವನ್ನು ನಿರ್ಮಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಅರಣ್ಯ ಇಲಾಖೆಯು ನಗರಗಳಲ್ಲಿ ವಾಸಿಸುವ ನಾಗರೀಕರಿಗೆ ಉತ್ತಮ ಪರಿಸರ ಒದಗಿಸಲು ವೃಕ್ಷೋದ್ಯಾನಗಳು/ ನಗರವನಗಳನ್ನು ನಿರ್ಮಿಸುವ ಕುರಿತು ಹೊರಡಿಸಿರುವ ಆದೇಶ ಸಂಖ್ಯೆ:ಅಪಜೀ 57 ಎಫ್ ಎ ಪಿ 2020, ದಿನಾಂಕ: 13-10-2020 ರಲ್ಲಿನ ಮಾರ್ಗಸೂಚಿಗಳನ್ವಯ ಕ್ರಮ ಕೈಗೊಳ್ಳಲಾಗುವುದು. |

**HORTI 107 HGM 2023**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು